# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 819 |
| ಸದಸ್ಯರ ಹೆಸರು | ಶ್ರೀ ಹೆಚ್.ಎಂ.ರಮೇಶ್‌ಗೌಡ |
| ಉತ್ತರಿಸುವ ದಿನಾಂಕ: | 11-03-2020 |
| ಉತ್ತರಿಸುವವರು | ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| | ಪ್ರಶ್ನೆ | ಉತ್ತರ |
|---|---|---|
| ಅ | ಧಾರ್ಮಿಕ ದತ್ತಿ ಇಲಾಖೆಯಡಿ ರಾಜ್ಯದ ವಿವಿಧ ಭಾಗಗಳಲ್ಲಿರುವ ಚಾರಿತ್ರಿಕ ಹಿನ್ನಲೆಯ ಪ್ರಸಿದ್ಧ ದೇವಾಲಯ್ಯಗಳು ಶ್ರದ್ಧಾ ಕೇಂದ್ರಗಳ ಜೀರ್ಣೋದ್ಧಾರಕ್ಕಾಗಿ ಪ್ರಸಕ್ತ ಸಾಲಿನಲ್ಲಿ ಮಂಜೂರಾದ, ಬಿಡುಗಡೆಯಾದ ಹಾಗೂ ಬಾಕಿ ಉಳಿದಿರುವ ಅನುದಾನವೆಷ್ಟು; ಬಾಕಿ ಉಳಿಯಲು ಕಾರಣಗಳೇನು; (ಆದೇಶದೊಂದಿಗೆ ವಿವರ ನೀಡುವುದು) | 2019-20ನೇ ಸಾಲಿನಲ್ಲಿ ಧಾರ್ಮಿಕ ದತ್ತಿ ಇಲಾಖೆಯಿಂದ ರಾಜ್ಯದ ವಿವಿಧ ಭಾಗಗಳಲ್ಲಿರುವ ಧಾರ್ಮಿಕ ಸಂಸ್ಥೆ/ದೇವಾಲಯಗಳ, ಚಾರಿತ್ರಿಕ ಹಿನ್ನಲೆಯ ಪ್ರಸಿದ್ಧ ದೇವಾಲಯಗಳು ಶ್ರದ್ಧಾ ಕೇಂದ್ರಗಳ ಜೀರ್ಣೋದ್ಧಾರಕ್ಕಾಗಿ ಮುಜರಾಯಿ ಇಲಾಖೆಯ ದುರಸ್ಥಿ ಜೀರ್ಣೋದ್ಧಾರಕ್ಕಾಗಿ ರೂ.125.81 ಕೋಟಿಗಳ ಅನುದಾನ ಮಂಜೂರಾತಿ ಆದೇಶ ಹೊರಡಿಸಲಾಗಿರುತ್ತದೆ. ಫೆಬ್ರವರಿ 2020ರ ಅಂತ್ಯದವರೆಗೆ ರೂ.95.68 ಕೋಟಿಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದ್ದು, ಬಾಕಿ ರೂ.30.13 ಕೋಟಿಗಳ ಅನುದಾನವನ್ನು ಆರ್ಥಿಕ ಇಲಾಖೆಯಿಂದ ಬಿಡುಗಡೆಗೆ ಬಾಕಿ ಇರುತ್ತದೆ. |
| ಆ | ರಾಜ್ಯದ ನಾನಾ ಭಾಗಗಳಲ್ಲಿರುವ ಶತಮಾನಗಳ ಇತಿಹಾಸವಿರುವ ಪ್ರಾಚೀನ ದೇವಾಲಯಗಳನ್ನು ಮುಜರಾಯಿ ಇಲಾಖೆ ಸ್ವಾಧೀನಪಡಿಸಿ ಧಾರ್ಮಿಕ ಪ್ರವಾಸೋದ್ಯಮ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಇದನ್ನು ಪೂರ್ಣಗೊಳಿಸಲಾಗುವುದು; (ವಿವರ ನೀಡುವುದು) | ರಾಜ್ಯದ ನಾನಾ ಭಾಗಗಳಲ್ಲಿರುವ ಶತಮಾನಗಳ ಇತಿಹಾಸವಿರುವ ಪ್ರಾಚೀನ ಖಾಸಗಿ ದೇವಾಲಯಗಳನ್ನು ಮುಜರಾಯಿ ಇಲಾಖೆ ಸ್ವಾಧೀನಪಡಿಸಿ ಧಾರ್ಮಿಕ ಪ್ರವಾಸೋದ್ಯಮ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಇರುವುದಿಲ್ಲ. |
| ಇ | ಮುಜರಾಯಿ ಇಲಾಖೆಯಡಿ ಬರುವ ರಾಜ್ಯದ ಪ್ರಸಿದ್ಧ ದೇವಾಲಯಗಳ ಕಳೆದೆರಡು ವರ್ಷಗಳ ಆದಾಯವೆಷ್ಟು; (ಜಿಲ್ಲಾವಾರು ದೇವಾಲಯಗಳ ಆದಾಯ, ಹುಂಡಿ ಸಂಗ್ರಹ, ಆನ್‌ಲೈನ್ ಸೇವೆ ಇತ್ಯಾದಿ ಆದಾಯದ ಮೂಲಗಳ ಸಂಪೂರ್ಣ ವಿವರ ನೀಡುವುದು) | ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ರಾಜ್ಯದ ಪ್ರಸಿದ್ಧ ಪ್ರಮುಖ ಹತ್ತು ದೇವಾಲಯಗಳಿಂದ ಕಳೆದ ಎರಡು ವರ್ಷಗಳಲ್ಲಿ ಹುಂಡಿ ಸಂಗ್ರಹ, ಆನ್‌ಲೈನ್ ಸೇವೆ ಇತ್ಯಾದಿಗಳ ಮೂಲಗಳಿಂದ ಬಂದಿರುವ ಆದಾಯ ಒಟ್ಟು ರೂ.**546.28** ಕೋಟಿಗಳು.<br>ಸದರಿ ದೇವಾಲಯವಾರು ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.<br>ಆದರೆ, ದೇವಾಲಯಗಳಿಂದ ಸರ್ಕಾರಕ್ಕೆ ಯಾವುದೇ ಆದಾಯ ಬರುವುದಿಲ್ಲ. ದೇವಾಲಯಗಳಲ್ಲಿ ಸಂಗ್ರಹವಾಗುವ ಆದಾಯವನ್ನು ಆಯಾಯಾ ದೇವಾಲಯದ ಜೀರ್ಣೋದ್ಧಾರ/ಅಭಿವೃದ್ಧಿಗಾಗಿ ಖರ್ಚು ಮಾಡಲಾಗುತ್ತದೆ. |

(ಸಂಖ್ಯೆ:ಕಂಇ 32 ಮುಸಪ್ರ 2020)

**(ಕೋಟಾ ಶ್ರೀನಿವಾಸ ಪೂಜಾರಿ)**
ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು
ಮತ್ತು ಒಳನಾಡು ಜಲ ಸಾರಿಗೆ ಸಚಿವರು

# ಅನುಬಂಧ

ಮುಜರಾಯಿ ಇಲಾಖೆಯಡಿ ಬರುವ ಪ್ರಸಿದ್ಧ ದೇವಾಲಯಗಳ ಕಳೆದೆರಡು ವರ್ಷದ ಆದಾಯ, ಹುಂಡಿಸಂಗ್ರಹ,ಆನ್‌ಲೈನ್ ಸೇವೆಗಳ ಮಾಹಿತಿ ವಿವರ

(ಮೊತ್ತ ರೂ.ಗಳಲ್ಲಿ)

| ಕ್ರ. ಸಂ | ದೇವಸ್ಥಾನ | ವರ್ಷ | ದೇವಾಲಯದ ವಾರ್ಷಿಕ ಆದಾಯ | ಹುಂಡಿ ಆದಾಯ | ಆನ್‌ಲೈನ್ ಸೇವೆ | ಇತ್ಯಾದಿ ಆದಾಯ |
|---|---|---|---|---|---|---|
| 1 | ದಕ್ಷಿಣಕನ್ನಡ ಜಿಲ್ಲೆ, ಕಡಬ ತಾಲ್ಲೂಕು ಸುಬ್ರಹ್ಮಣ್ಯ ಗ್ರಾಮ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ. | 2017-18 | 97,09,54,556.00 | 20,53,41,040.00 | 32,74,04,180.00 | 43,82,09,336.00 |
| | | 2018-19 | 95,66,86,842.00 | 17,44,53,989.00 | 33,83,69,742.00 | 44,38,63,111.00 |
| 2 | ಉಡುಪಿ ಜಿಲ್ಲೆ ಬೈಂದೂರು ತಾ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನ. | 2017-18 | 42,28,18,136.00 | 8,40,05,285.00 | 19,25,95,393.00 | 14,62,17,458.00 |
| | | 2018-19 | 41,46,54,836.00 | 7,55,66,984.00 | 18,70,44,113.00 | 15,20,43,739.00 |
| 3 | ಮೈಸೂರು ಜಿಲ್ಲೆ ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ದೇವಸ್ಥಾನ. | 2017-18 | 29,95,17,650.00 | 10,25,37,945.00 | 1,51,08,012.00 | 18,18,71,693.00 |
| | | 2018-19 | 33,30,88,840.00 | 11,57,54,977.00 | 1,73,77,950.00 | 19,99,55,913.00 |
| 4 | ದಕ್ಷಿಣ ಕನ್ನಡ ಜಿಲ್ಲೆ ಕಟೀಲು. ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ. | 2017-18 | 24,07,10,037.00 | 4,41,75,852.00 | 10,37,45,975.00 | 9,27,88,210.00 |
| | | 2018-19 | 24,28,82,982.00 | 4,31,19,079.00 | 10,06,17,500.00. | 9,91,46,403.00 |
| 5 | ಮೈಸೂರು ಜಿಲ್ಲೆ, ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನ. | 2017-18 | 27,34,29,319.00 | 9,00,52,666.00 | 1,59,48,594.00 | 16,74,28,059.00 |
| | | 2018-19 | 21,03,00,801.00 | 9,73,57,465.00 | 1,79,86,052.00 | 9,49,57,284.00 |
| 6 | ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು ಯಲ್ಲಮ್ಮಗುಡ್ಡ ಶ್ರೀ ರೇಣುಕಾ ಯಲ್ಲಮ್ಮ ದೇ. | 2017-18 | 18,68,41,083.00 | 5,45,27,729.00 | 92,34,323.00 | 12,30,79,031.00 |
| | | 2018-19 | 20,25,58,995.00 | 5,30,27,704.00 | 89,91,723.00 | 14,05,39,568.00 |
| 7 | ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಯಡಿಯೂರುಶ್ರೀ ಸಿದ್ಧಲಿಂಗೇಶ್ವರ ದೇವಸ್ಥಾನ. | 2017-18 | 7,61,90,085.00 | 3,05,37,311.00 | 1,76,29,536.00 | 2,80,23,238.00 |
| | | 2018-19 | 9,02,24,560.00. | 3,40,28,447.00 | 1,73,63,370.00 | 3,88,32,743.00 |
| 8. | ಉಡುಪಿ ಜಿಲ್ಲೆ ಉಡುಪಿ ತಾಲ್ಲೂಕು ಮಂದಾರ್ತಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ | 2017-18 | 9,92,68,751.00 | 1,97,19,472.00 | 1,97,68,228.00 | 5,97,81,051.00 |
| | | 2018-19 | 11,62,76,694.00 | 2,12,27,059.00 | 2,21,47,741.00 | 7,29,01,894.00 |
| 9. | ಬೆಂಗಳೂರುನಗರ ಎಸ್ ಕರಿಯಪ್ಪ ರಸ್ತೆ ಬನಶಂಕರಿ ಶ್ರೀ ಬನಶಂಕರಿ ದೇವಸ್ಥಾನ | 2017-18 | 8,53,77,373.00 | 3,16,84,708.00 | 71,16,238.00 | 4,65,76,427.00 |
| | | 2018-19 | 8,96,80,486.00 | 3,57,22,712.00 | 87,52,648.00 | 4,52,05,126.00 |
| 10 | ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯ ಎಸ್.ಎಸ್ ಘಾಟಿ ದೊಡ್ಡಬಳ್ಳಾಪುರ ತಾಲ್ಲೂಕು | 2017-18 | 7,21,17,805.00 | 2,96,53,000.00 | 1,81,53,683.00 | 2,43,11,122.00 |
| | | 2018-19 | 7,93,15,805.00 | 3,26,54,221.00 | 2,18,80,609.00 | 2,47,80,975.00 |

M. L. Varalakshmi

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಮುಜರಾಯಿ)